'ಯಾಕೆ ಹಾಗೆ ಕೇಳುತ್ತಿದ್ದೀರಿ? ನಿಮಗೇನಾದರೂ ನನ್ನ ಮೇಲೆ....'

'ಆಸೆ ಇದೆ'

'ನಿಮ್ಮ ಆಸೆ ನಾನು ಗರ್ಭ ಧರಿಸುವವರೆಗೆ ಮಾತ್ರ. ನಂತರ ಹೇಗಿರಬೇಕೆಂಬುದನ್ನು ರಂಗನಾಥ ನಿಮಗೆ ಹೇಳಿದ್ದಾನಾ?'

'ಹೌದು ಹೇಳಿದ್ದಾನೆ'

'ನೀವು ಆ ನನ್ನ ಎಲ್ಲಾ ಕಂಡೀಷನ್‌ಗೆ ಒಪ್ಪೋದಾದ್ರೆ ನನಗೂ ಒಪ್ಪಿಗೇನೆ'. ಫಿಲ್ಟರ್ ಇಲ್ಲದಂತೆ ಮಾತಾಡುವುದರಲ್ಲಿ ಅವಳಿಗಿಂತ ತಾನೇನು ಕಡಿಮೆ ಇಲ್ಲ ಎಂಬಂತೆ, 'ಇವತ್ತು ಬೇಡ, ಇನ್ನೊಂದು ದಿನ ಇಬ್ಬರ ನೆನಪಿನಲ್ಲುಳಿಯುವಂತೆ ಒಳ್ಳೆಯ ಮಿಲನ ಉತ್ಸವ ಮಾಡೋಣ' ಎಂದ.

'ಅದರಲ್ಲೂ ಒಳ್ಳೆಯದು, ಕೆಟ್ಟದ್ದು ಎಂಬುದು ಇರುತ್ತದೆಯೇ' ಎಂದು ಕೇಳಬೇಕೆನಿಸಿತು. ಆದರೆ ಅವಳು ಕೇಳಲಿಲ್ಲ. ತಾನು ಬಯಸುತ್ತಿದ್ದಂಥವನೇ ಸಿಕ್ಕಿದ ಎಂದು ಮನಸ್ಸಿನಲ್ಲೇ ಖುಷಿಪಟ್ಟಳು.



'ಈ ವಿಷಯವನ್ನು ರಂಗನಾಥನಿಗೆ ಹೇಳಲೇ ಎಂದು ಅಂದುಕೊಂಡವಳು ಕೊನೆಗೆ ಬೇಡ, ಮೊದಲೇ ಅವನಿಗೆ ಇದೆಲ್ಲ ಇಷ್ಟವಿಲ್ಲ. ಹೇಳಿದರೆ ಕೃಷ್ಣಯ್ಯಂಗಾರಿನ ನನ್ನ ಮನೆ ಹತ್ರ ಬರ್ದಂಗೆ ಮಾಡಿಬಿಡ್ತಾನೆ. ಹೇಳದೇ ಸುಮ್ಮನಿದ್ದರೆ ಒಳ್ಳೆಯದು' ಎಂಬ ತೀರ್ಮಾನಕ್ಕೆ ಬಂದಳು.

ಆ ದಿನ ಕೂಡಿ ಬಂದಿತು. ಫೋನು ಮಾಡಿ ರಾತ್ರಿ ಮನೆಗೆ ಬರುವುದಾಗಿ ಕೃಷ್ಣಯ್ಯಂಗಾರಿ ಹೇಳಿದಾಗ, ಅಡುಗೆ ಕೋಣೆಗೆ ಹೋಗಿ ಸಣ್ಣದನಿಯಲ್ಲಿ, 'ರಂಗನಾಥ ಇದ್ದಾನೆ. ಹತ್ತು ಗಂಟೆಯ ಮೇಲೆ ಬನ್ನಿ' ಎಂದಳು.

'ಕೃಷ್ಣಯ್ಯಂಗಾರಿ ಮತ್ತೆ ಬಂದಿದ್ನಾ?' ರಂಗನಾಥ ಪ್ರಶ್ನೆಗೆ 'ಇಲ್ಲ ಅವತ್ತೇ ಕೊನೆ' ಎಂದಳು. ಅವಳನ್ನೇ ಎವೆಯಿಕ್ಕದೆ ಪರಮಾಶ್ಚರ್ಯದಿಂದ ನೋಡುತ್ತಾ ಕೇಳಿದ.

'ಇದೇನು ಇವತ್ತು ಸೀರೆ ಉಟ್ಕೊಂಡಿದ್ದೀಯಾ?'

'ಸೀರೆ ಉಟ್ಕೊಂಡ್ರೆ ಚೆನ್ನಾಗಿ ಕಾಣ್ತೀನಂತ ನೀನೇ ಹೇಳ್ತಿದ್ಯಲ್ಲ, ಅದ್ಕೆ ಉಟ್ಕೊಂಡೆ'

'ನಮ್ಮ ಸಂಸ್ಕೃತಿನ ಬಿಡಬಾರ್ದು ಗೊತ್ತಾ' ಎಂದ ರಂಗನಾಥ, 'ಬರ್ತೀನಿ' ಎಂದು ಹೊರಟ. ರಾಧಾ ಕೃಷ್ಣಯ್ಯಂಗಾರಿಗೆ ಫೋನ್ ಮಾಡಿದಳು.

ಅವನು ಮನೆಯೊಳಗೆ ಕಾಲಿಡುತ್ತಲೇ ಅವನು ತನ್ನ ಮೈಗೆ ಪೂಸಿಕೊಂಡಿದ್ದ ಸುಗಂಧ ದ್ರವ್ಯದ ಘಮ ರಾಧಾಳ ಉಸಿರಿಗೆ ಬೆರೆತು ಅವಳ ಮನಸು ಉಲ್ಲಸಿತವಾಯಿತು. ಆಗಷ್ಟೇ ರಾಧಾ ಹಾಸಿದ್ದ ಹಾಸಿಗೆ ಮೇಲೆ ತಾನು ತಂದಿದ್ದ ಮಲ್ಲಿಗೆ ಹೂವುಗಳನ್ನು ಹರಡಿದ. ರಾಧಾ ಕೇಳಿದಳು.

'ಇದೇನು ಮಲ್ಲಿಗೆ ಹೂವು. ಫಸ್ಟ್ ನೈಟ್ ಥರ ಮಾಡಿಕೊಳ್ಳಲು ನಾವೇನು ಮದುವೆಯಾದ ವಧು – ವರರೇ?'

'ನಾವು ಮದುವೆಯಾಗದೇ ಇರಬಹುದು. ಆದರೆ ನಮಗಿಬ್ಬರಿಗೂ ಇದು ಪ್ರಥಮ ರಾತ್ರಿಯಲ್ಲವೆ? ಎಂದೆನ್ನುತ್ತ ಶರಟು ಗುಂಡಿ ಬಿಚ್ಚಿದ. ಅವಳು ಲೈಟ್ ಆಫ್ ಮಾಡಿದಳು.

ರಾತ್ರಿಯೆಲ್ಲಾ ಇಬ್ಬರೂ ಜಾಗರಣೆ ಮಾಡಿದರು. ಬೆಳಕು ಹರಿಯುವ ಮುನ್ನವೇ ಕೃಷ್ಣಯ್ಯಂಗಾರಿ ಮನೆಯಿಂದ ಹೊರಬಿದ್ದ. ಸ್ವಲ್ಪ ಹೊತ್ತು ನಿದ್ದೆಯ ಮಂಪರಿನಲ್ಲಿ ಇದ್ದ ಅವಳಿಗೆ ಪೂರ್ಣ ಎಚ್ಚರವಾದಾಗ ಹೂವುಗಳ ದಂಡೆಯಿಂದ ನಿರಂತರವಾಗಿ ಹೊಡೆದಂತೆ ಅವಳ ಮೈಯೆಲ್ಲಾ ಸುಖ ಲೇಪಿತದಿಂದ ಕೂಡಿ ಸಣ್ಣದಾಗಿ ನೋಯುತ್ತಿತ್ತು. ಅವನು ಹೇಳಿದಂತೆ ಒಳ್ಳೆಯ ಮಿಲನ ಉತ್ಸವ ಎಂದರೆ ಇದೇ ಇರಬೇಕು ಎಂದುಕೊಂಡಳು.

*

ತಿಂಗಳುಗಳು ಉರುಳಿದಂತೆ ರಾಧಾಳ ಹೊಟ್ಟೆ ಉಬ್ಬುತ್ತಾ ಬರುತ್ತಿರುವುದನ್ನು ಗಮನಿಸಿದ ಆಫೀಸಿನ ಸಹೋದ್ಯೋಗಿಗಳು ರಂಗನಾಥನೆಡೆಗೆ ಅನುಮಾನದ ದೃಷ್ಟಿ ಬೀರತೊಡಗಿದರು. ರಂಗನಾಥನೇ ಒಂದು ದಿನ, 'ರಾಧಾಳಿಗೆ ಮದುವೆಯಾಗಿದೆ. ಅವಳ ಗಂಡ ಜರ್ನಲಿಸ್ಟ್. ಸರಳವಾಗಿ ವಿವಾಹವಾಗಿದ್ದರಿಂದ ನಿಮ್ಮನ್ನು ಅವಳು ಕರೆದಿಲ್ಲ' ಎಂದು ಹೇಳಿದ.